ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕೊಪ್ಪ ವಿಭಾಗ, ಕೊಪ್ಪ
ದೂರವಾಣಿ:08265-221266
ಇ-ಮೇಲ್:-dcfkoppa@gmail.com

ಸಂಖ್ಯೆ: ಡಿಎಫ್‌ಟಿ.:ಎಫ್‌ಸಿಎ:ಸಿಆರ್:12/2021-22

ದಿನಾಂಕ: 29-11-2021

ಇವರಿಗೆ,

**Sri. VV Babu,** DGM, SEO,
Jio Digital Fibre Private Limited,
No.51, RMZ Icon, Palace Cross road,
Vasanthanagar, Bengaluru-52

ಮಾನ್ಯರೇ,

ವಿಷಯ:- Diversion of 0.2239ha. of forest land for Jio Digital Fiber Underground OFC Cable from Karkala to Sringeri Boarder trough Reserve Forest in various villages of Koppa Division under FC Act-1980 in favour of Jio Digital Fibre Private Limited, Benagaluru.

ಉಲ್ಲೇಖ:-1. ನಿಮ್ಮ ಪತ್ರ ದಿನಾಂಕ:24-09-2021.
2. Forest Proposal No. FP/KA/OFC/140929/2021.
3. ಈ ಕಛೇರಿ ಪತ್ರದ ಸಮಸಂಖ್ಯೆ ದಿನಾಂಕ:08-10-2021.
4. ವಲಯ ಅರಣ್ಯಾಧಿಕಾರಿ, ಶೃಂಗೇರಿ ವಲಯ, ಶೃಂಗೇರಿ ಇವರ ಕಛೇರಿ ಪತ್ರ ಸಂಖ್ಯೆ: 969/2021-22 ದಿನಾಂಕ:19-11-2021.
5. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬಾಳೆಹೊನ್ನೂರು ಉಪವಿಭಾಗ, ಬಾಳೆಹೊನ್ನೂರು ಇವರ ಕಛೇರಿ ಪತ್ರ ಸಂಖ್ಯೆ:549/2021-22 ದಿನಾಂಕ:20-11-2021.

***

ವಿಷಯಕ್ಕೆ ಸಂಬಂಧಿಸಿದಂತೆ, Jio Digital Fiber Underground OFC Cable from Karkala to Sringeri Boarder trough Reserve Forest ಅಳವಡಿಸಲು ಶೃಂಗೇರಿ ವಲಯ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ 0.2239 ಹೆಕ್ಟೇರ್ ಪ್ರದೇಶದಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಅರಣ್ಯ ಸಂರಕ್ಷಣಾ ಕಾಯ್ದೆ-1980ರಡಿ ಅರಣ್ಯ ಪ್ರದೇಶವನ್ನು ಬಿಡುಗಡೆಗೊಳಿಸುವಂತೆ ಕೋರಿ ಆನ್‌ಲೈನ್ ಪೋರ್ಟಲ್ ಮೂಲಕ ದಿನಾಂಕ:09-04-2021 ರಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ನೋಡೆಲ್ ಅಧಿಕಾರಿಯವರು (ಅರಣ್ಯ ಸಂರಕ್ಷಣೆ) ಬೆಂಗಳೂರು ಇವರಿಗೆ ಸಲ್ಲಿಸಿರುತ್ತೀರಿ. ಉಲ್ಲೇಖ (1)ರ ದಿನಾಂಕ:24-09-2021ರ ಪತ್ರದಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಿದ ಪ್ರಸ್ತಾವನೆಯ ಹಾರ್ಡ್ ಕಾಪಿಯನ್ನು ಈ ಕಛೇರಿಗೆ ಸಲ್ಲಿಸಿರುತ್ತೀರಿ.

ನಮೂನೆ-ಎ ಭಾಗ-1ರಲ್ಲಿ ಶೃಂಗೇರಿ ವಲಯದಲ್ಲಿ underground OFC cable ಕಾಮಗಾರಿಯನ್ನು ಕೈಗೊಳ್ಳುವ ಕುರಿತು ಅರಣ್ಯ/ಅರಣ್ಯೇತರ ಪ್ರದೇಶಗಳ ವಿವರಗಳನ್ನು ಈ ಕೆಳಕಂಡಂತೆ ನಮೂದಿಸಲಾಗಿರುತ್ತದೆ.

| Sl.No | Name of the Village | Sy.No | Forest Land (in Ha.) | Non Forest land (in ha) |
|---|---|---|---|---|
| 1 | Sringeri | | 0 | 0.1048 |
| 2 | Uluvalli | 63 | 0.00236 | 0 |
| 3 | Uluvalli | | 0 | 0.0279 |
| 4 | Yadadalu | 103 | 0.036 | 0 |
| 5 | Yadadalu | 105 | 0.0095 | 0 |
| 6 | Vidyaranyapura | 197 | 0.0222 | 0 |
| 7 | Vidyaranyapura | | 0 | 0.0242 |

Scanned by CamScanner

ಸದರಿ ಪ್ರಸ್ತಾವನೆಗೆ ಸಂಬಂಧಪಟ್ಟಂತೆ ಸ್ಥಳ ಪರಿಶೀಲಿಸಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬಾಳೆಹೊನ್ನೂರು ಉಪವಿಭಾಗ, ಬಾಳೆಹೊನ್ನೂರು ಇವರ ಮುಖಾಂತರ ವರದಿ ಸಲ್ಲಿಸುವಂತೆ ಉಲ್ಲೇಖ (3)ರ ಈ ಕಛೇರಿಯ ಪತ್ರದಲ್ಲಿ ವಲಯ ಅರಣ್ಯಾಧಿಕಾರಿ, ಶೃಂಗೇರಿ ವಲಯ, ಶೃಂಗೇರಿ ಇವರಿಗೆ ಸೂಚಿಸಲಾಗಿತ್ತು. ಅದರಂತೆ ವಲಯ ಅರಣ್ಯಾಧಿಕಾರಿ, ಶೃಂಗೇರಿ ವಲಯ, ಶೃಂಗೇರಿ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬಾಳೆಹೊನ್ನೂರು ಉಪವಿಭಾಗ, ಬಾಳೆಹೊನ್ನೂರು ಇವರು ದಿನಾಂಕ:19-11-2021ರಂದು ಸ್ಥಳ ಪರಿಶೀಲಿಸಿ underground OFC cable ಕಾಮಗಾರಿಯನ್ನು ಕೈಗೊಳ್ಳುವ ಕುರಿತು ಅರಣ್ಯ/ಅರಣ್ಯೇತರ ಪ್ರದೇಶಗಳ ವಿವರಗಳನ್ನು ಈ ಕೆಳಕಂಡಂತೆ ನೀಡಿರುತ್ತಾರೆ.

| Sl.No | Name of the Village | Sy.No | Forest Land (in Ha.) | Non Forest land (in ha) |
|---|---|---|---|---|
| 1 | Sringeri | 147, 113, 115, 142, 2, 62, 64, 53, 54 | 0 | 0.043 |
| 2 | Uluvalli | 121, 144, 148, 145, 19, 40, 63, 6, 5 | 0 | 0.085 |
| 3 | Yadadalu | 105, 103 | 0.039 | 0 |
| 4 | Vidyaranyapura | 275, 197, 196 | 0 | 0.0294 |

ನೀವು ಸಲ್ಲಿಸಿರುವ ಪ್ರಸ್ತಾವನೆಯನ್ನು ಮತ್ತು ಇಲಾಖಾ ಅಧಿಕಾರಿಗಳು ನೀಡಿರುವ ವರದಿಯನ್ನು ಪರಿಶೀಲಿಸಿದಾಗ ಸರ್ವೇ ನಂಬರ್, ವಿಸ್ತೀರ್ಣ ಮತ್ತು ಅರಣ್ಯ/ಅರಣ್ಯೇತರ ಪ್ರದೇಶಗಳ ವಿವರ ಹೊಂದಾಣಿಕೆಯಾಗುತ್ತಿಲ್ಲ. ಇಲಾಖಾ ಅಧಿಕಾರಿಗಳ ವರದಿಯಂತೆ underground OFC cable ಅಳವಡಿಸುವ ಕಾಮಗಾರಿಯು ಯಡದಾಳು ಗ್ರಾಮದ ಸ.ನಂ 103 ಮತ್ತು 105 ರಲ್ಲಿ 0.039ಹೆಕ್ಟೇರ್ ಸೆಕ್ಷನ್-4ರ ಅಧಿಸೂಚಿತ ಅರಣ್ಯ ಪ್ರದೇಶದಲ್ಲಿ ಹಾದುಹೋಗುವುದರಿಂದ ನೀವು ಸಲ್ಲಿಸಿದ ಪ್ರಸ್ತಾವನೆಯನ್ನು ಸರಿಪಡಿಸಿ ಮರು ಸಲ್ಲಿಸುವಂತೆ ಸೂಚಿಸುತ್ತಾ, ಈ ಪತ್ರದೊಂದಿಗೆ ನೀವು ಸಲ್ಲಿಸಿರುವ ಪ್ರಸ್ತಾವನೆಯ 07 ಬುಕ್‌ಲೆಟ್‌ಗಳನ್ನು ಲಗತ್ತಿಸಿ ಹಿಂದಿರುಗಿಸಿದೆ.

ನಿಮ್ಮ ವಿಶ್ವಾಸಿ,
ಸಹಿ/-
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೊಪ್ಪ ವಿಭಾಗ, ಕೊಪ್ಪ

1. ಪ್ರತಿಯನ್ನು ಗೌರವಗಳೊಂದಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನೋಡೆಲ್ ಅಧಿಕಾರಿಯವರು (ಅರಣ್ಯ ಸಂರಕ್ಷಣೆ)ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಗೌರವಗಳೊಂದಿಗೆ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಮಗಳೂರು ವೃತ್ತ, ಚಿಕ್ಕಮಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಪ್ರತಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬಾಳೆಹೊನ್ನೂರು ಉಪವಿಭಾಗ, ಬಾಳೆಹೊನ್ನೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
4. ಪ್ರತಿಯನ್ನು ವಲಯ ಅರಣ್ಯಾಧಿಕಾರಿ, ಶೃಂಗೇರಿ ವಲಯ, ಶೃಂಗೇರಿ ಇವರ ಮಾಹಿತಿಗಾಗಿ ಕಳುಹಿಸಿದೆ.

ರವಾನಿಸಲಾಗಿದೆ.
29 NOV 2021

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೊಪ್ಪ ವಿಭಾಗ, ಕೊಪ್ಪ

Scanned by CamScanner